# ನಿಂಬೆ ಹಣ್ಣಾಯಣ

'ನಿಂಬೆಗಿಡ ತುಂಬಾ ಚೆಂದ, ನಿಂಬೆಯ ಹೂವು ತುಂಬಾ ಸಿಹಿ / ಆದರೆ ನಿಂಬೆಯ ಹಣ್ಣೊ, ಕಂದ, ತಿನ್ನಲು ಬಹಳ ಹುಳಿ, ಕಹಿ' – ಕವಿ ಬಿ.ಆರ್. ಲಕ್ಷ್ಮಣ್ ರಾವ್ ಅವರ ಈ ಜನಪ್ರಿಯ ಕವಿತೆ ನಿಂಬೆಯ ಅನನ್ಯತೆಗೆ ಸಂಬಂಧಿಸಿದ ಸರಳ ವ್ಯಾಖ್ಯಾನದಂತಿದೆ. ಹುಳಿ–ಕಹಿ ಹದವಾಗಿ ಬೆರೆತ ಕಾರಣಕ್ಕಾಗಿಯೇ ಅಡುಗೆಮನೆಯಿಂದ ಹಿಡಿದು, ಹಬ್ಬ– ಹರಿದಿನ, ಮಾಟ–ಮಂತ್ರ, ಹುಣ್ಣಿಮೆ–ಅಮವಾಸ್ಯೆ ಎಲ್ಲೆಡೆಯೂ ಇದರ ಕಾರು–ಬಾರು ಜೋರು.

ಮೊನ್ನೆ ನನ್ನ ಚಿಕ್ಕಮಗಳೂರಿನ ಸ್ನೇಹಿತನೊಬ್ಬ ಕಾಫಿ ಜಪ ಮಾಡುತ್ತಿದ್ದವನು ಲೆಮನ್ ಟೀಗೆ ಬಿದ್ದಿದ್ದ. ನಗರಸಭೆ ಚುನಾವಣೆಗೆ ನಿಂತು ಸೋತಿದ್ದ ಆತ, 'ಟೀ ಮಾರಿದವರು ಪ್ರಧಾನಿ, ನಿಂಬೆಹಣ್ಣು ಮಾರಿದವರು ನಾಲ್ಕು ಬಾರಿ ಮುಖ್ಯಮಂತ್ರಿಗಳಾಗಿದ್ದಾರೆ. ಎರಡನ್ನು ಮಿಕ್ಸ್ ಮಾಡಿ ಸೇವಿಸಿದರೆ ಕನಿಷ್ಠ ನಗರಸಭೆ ಮೆಂಬರ್ ಆದ್ರೂ ಸಿಕ್ಕೇ ಸಿಗುತ್ತೆ' ಎಂಬ ನಂಬಿಕೆ ಮೇಲೆ ಲೆಮನ್ ಟೀ ಪ್ರೇಮಿಯಾಗಿದ್ದ.

ನಾನು ಚಿಕ್ಕವನಿದ್ದಾಗ ನನ್ನ ಮನೆಯ ಹಿತ್ತಲೇ ತಿಪ್ಪೆಯಾಗಿದ್ದ ಸಂದರ್ಭ. ಒಂದು ನಿಂಬೆಗಿಡ ಹಾಗೂ ಕರಿಬೇವಿನ ಸೊಪ್ಪಿನ ಗಿಡವನ್ನು ಅಣ್ಣ ನೆಟ್ಟಿದ್ದರು. ಅವೆರಡರ ಮೇಲೆ ಊರಿನವರ ಕಣ್ಣು ಬಿದ್ದು ಒಂದೆರಡು ಎಸಳು ಕರಿಬೇವಿನ ಸೊಪ್ಪು ಬೇಕೆಂದೋ, ನೆಂಟರು ಬಂದಿದಾರೆ ಶರಬತ್ತು ಮಾಡಲು ನಿಂಬೆ ಹಣ್ಣು ಬೇಕೆಂದೋ ಎಂದು ಬರಲಾರಂಭಿಸಿದರು. ಒಮ್ಮೆ ಅದೇನೋ ಬೇಜಾರಿನಲ್ಲಿದ್ದ ಅಣ್ಣ ಅವೆರೆಡೂ ಗಿಡ ಕಡಿದುಹಾಕಿದರು. ಅಣ್ಣನ ದುಡುಕನ್ನು ನೆನಪಿಸಿಕೊಂಡು ಸಾಯುವ ಕೊನೆಯ ದಿನದವರೆಗೂ ಅಕ್ಕ ಕೊರಗುತ್ತಿದ್ದರು.

ನಾವು ಮಾಧ್ಯಮಿಕ ಶಾಲೆಯಲ್ಲಿದ್ದಾಗ ಒಬ್ಬ ಎಂ.ಕೆ. ಮಾಸ್ತರರು ನಮ್ಮಲ್ಲಿಗೆ ಬಂದಿದ್ದರು. ಅವರು ತುಂಬಾ ಓದಿದ್ದಾರೆಂದು, ಅವರ ಓದಿಗೆ ಪಡೆದ ಡಿಗ್ರಿಗೆ ಕಾಲೇಜಿನಲ್ಲಿ ಪಾಠ ಮಾಡಬೇಕಾಗಿತ್ತೆಂದು, ಅವರನ್ನು ಪರಿಚಯಿಸಿದ ಮಾಸ್ತರರು ತಿಳಿಸಿದರು. ಎಂ.ಕೆ. ಮಾಸ್ತರರು ನಾಳೆ ಬರುವಾಗ ಮನೆಯಲ್ಲಿ ಇದ್ದವರು ನಿಂಬೆಹಣ್ಣನ್ನು ತರಬೇಕೆಂದು. ಅದರಲ್ಲಿ ಮ್ಯಾಜಿಕ್ ಮಾಡಿ ತೋರಿಸುವುದಾಗಿ ತಿಳಿಸಿದ್ದರು. ನಾನು ಮನೆಯಲ್ಲಿದ್ದ ಗಿಡದಿಂದ ಎರಡು ನಿಂಬೆಹಣ್ಣನ್ನು ಕಿತ್ತೊಯ್ದಿದ್ದೆ. ಅವೆರಡಕ್ಕೂ ಸಂಪರ್ಕ ಕಲ್ಪಿಸಿ ಸಣ್ಣ ಬಲ್ಪ್ ಹತ್ತುವಂತೆ ಮಾಡಿದರು. ನಂತರ ನನ್ನ ಮನಸ್ಸಿನಲ್ಲಿ ಒಂದು ಹೂವಿನ ಹೆಸರನ್ನು ಸ್ಮರಿಸಿಕೊಂಡು ಅದನ್ನು ಪೇಪರ್‌ನಲ್ಲಿ ಬರೆಯಲು ಹೇಳಿದರು. ನಂತರ ಅದನ್ನು ಸುಟ್ಟು, ಬಂದ ಕಪ್ಪು ಬೂದಿಯಲ್ಲಿ ಅವರ ಮೊಣಕೈ ಮೇಲೆ ಒರೆಸಿಕೊಂಡರು. ಅದೇನಾಶ್ಚರ್ಯ?! ನಾನು ನೆನಸಿಕೊಂಡ 'ರೋಸ್' ಪದ ಅವರ ಮೊಣಕೈ ಮೇಲೆ ಎದ್ದು ಕಾಣಿಸುತ್ತಿತ್ತು.


ನಂತರ ಅವರೇ ಅದೇನು ದೊಡ್ಡ ಮ್ಯಾಜಿಕ್ ಅಲ್ಲವೆಂದೂ, ಅದು 'ಪ್ಯೂರ್ ಸೈನ್ಸ್' ಎಂದು ತಿಳಿಸಿದರು. ನಿಂಬೆರಸದಲ್ಲಿ ಕಡ್ಡಿ ಅದ್ದಿ ಅದನ್ನು ಕೈ ಮೇಲೆ ಬರೆದುಕೊಂಡರೆ ಅದು ಒಣಗಿದ ನಂತರ ಕಾಣುವುದಿಲ್ಲವೆಂದು, ಅದರ ಮೇಲೆ ಕಪ್ಪು ಬೂದಿ ಉಜ್ಜಿದಾಗ ಆ ಅಕ್ಷರಗಳು ಪ್ರತ್ಯಕ್ಷವಾಗುತ್ತವೆಂದು ತಿಳಿಸಿದರು. 'ರೋಸ್' ಪದವೇ ಹೇಗೆ ಮೂಡಿತು ಎಂಬ ನಮ್ಮ ಪ್ರಶ್ನೆಗೆ, ನಿಮಗೆ ಗೊತ್ತಿರುವ ಒಂದೇ ಹೂವಿನ ಇಂಗ್ಲಿಷ್ ಸ್ಪೆಲ್ಲಿಂಗ್ ಎಂದರೆ ಅದು ಮಾತ್ರವೆಂದು, ನೀವು ಬರೆಯುವುದೇ ಆ ಹೂವಿನ ಹೆಸರೆಂದು, ಮ್ಯಾಜಿಕ್‌ನ ಮರ್ಮವನ್ನು ತಿಳಿಸುತ್ತಿದ್ದರು.

ಇಕ್ಷ್ವಾಕು ವಂಶದ ಮೂಲ ಪುರುಷನೊಬ್ಬನಿಗೆ ಸರ್ಪದಿಂದ ಸಾವು ಎಂದು ತಿಳಿದ ಆತ ಸಾಗರದ ನಡುವೆ ಯಾರು ಪ್ರವೇಶಿಸದಂತೆ ಎಚ್ಚರವಹಿಸಿ ಅರಮನೆ ಕಟ್ಟಿಸಿ ಇರಬೇಕಾದರೆ, ಸಮುದ್ರದಲ್ಲಿ ತೇಲಿಹೋಗುತ್ತಿದ್ದ ನಿಂಬೆಹಣ್ಣೊಂದನ್ನು ಕಂಡು ಅದನ್ನು ಮೂಸಲು, ಅದರೊಳಗಿದ್ದ ಸರ್ಪದ ಮರಿಯೊಂದು ಕಚ್ಚಿ ಆತ ಅಸುನೀಗಿದ ಎನ್ನುವ ಕಥೆಯನ್ನು ಬಾಲ್ಯದಲ್ಲಿ ಕೇಳಿದ್ದೆ. ವಿಧಿ ಲಿಖಿತವನ್ನು ಅಳಿಸಲಾಗದು ಎಂದು ಆ ಕಥೆಯನ್ನು ಹೇಳುತ್ತಿದ್ದನ್ನು ಕೇಳಿದ ನೆನಪು.

ನಮ್ಮಕ್ಕನಿಗಂತೂ ಬಸ್ ಹತ್ತಿದ ಕೊಂಚ ದೂರ ಸಾಗಿದೊಡನೆ ವಾಂತಿ. ಅದಕ್ಕೆ ಪ್ರಯಾಣ ಅಂದರೆ ಸಾಕು ನಿಂಬೆಹಣ್ಣು ಹಿಡಿದು ಎಲ್ಲಿಯಾದರೂ ಸೀಟು ಹಿಡಿದು ಕುಳಿತು ಕಣ್ಣುಮುಚ್ಚಿ ನಿಂಬೆಹಣ್ಣನ್ನು ಮೂಗಿಗೆ ಹಚ್ಚಿ ಕುಳಿತರೆ ಇಳಿಯುವವರೆಗೂ ಸ್ಥಿತಿಯಲ್ಲಿ ಬದಲಾವಣೆಯಾಗುತ್ತಿರಲಿಲ್ಲ.

ಮಾಂಸಾಹಾರಿ, ಸಸ್ಯಾಹಾರಿಗಳಲ್ಲಿ ಸಮವಾಗಿ ಸ್ವೀಕರಿಸುವ ತರಕಾರಿಯೆಂದರೆ ನಿಂಬೆಹಣ್ಣೇ ಸರಿ. ನಾನು ಚಿಕ್ಕವನಿದ್ದಾಗ ನಮ್ಮ ಮನೆಯಲ್ಲಿ ಎರಡಕ್ಕೂ ಒಂದೇ ಒಗ್ಗರಣೆ ಹಾಕಿ ನಿಂಬೆಹಣ್ಣು ಹಿಂಡಿ ಚಿತ್ರಾನ್ನವಾಗಿಯೂ, ಮೊಸರು ಹಾಕಿ ಮೊಸರನ್ನವಾಗಿಯೂ ಮಾಡಿ ಬಾಕ್ಸ್‌ಗೆ ಹಾಕಿ ಕಳುಹಿಸುತ್ತಿದ್ದರು. ಚಿತ್ರಾನ್ನ, ಮೊಸರನ್ನ ಎಂದು ನಾವು ಕರೆದರೂ ಹೋಟೆಲ್‌ಗೆ ಹೋದಾಗ ಅವುಗಳನ್ನೇ ಲೆಮನ್ ರೈಸ್, ಕರ್ಡ್ ರೈಸ್ ಎನ್ನುತ್ತಿದ್ದದ್ದು ಕಂಡು ಕನ್ನಡದಲ್ಲಿ 'ಕರ್ಡ್ ರೈಸ್' ಮೊಸರನ್ನ ಸರಿ, ಲೆಮನ್ ರೈಸ್ 'ನಿಂಬೆ ಅನ್ನ' ಎಂದು ಯಾಕಾಗಲಿಲ್ಲ ಎಂದು ಯೋಚಿಸಿದ್ದೆ.

ಆಯುಧಪೂಜೆಯ ಸೀಸನ್ ನಿಂಬೆಹಣ್ಣಿನ ದಿನಗಳು ಹೌದು. ಕೆಲವರು ಪ್ರತಿದಿನ ವಾಹನ ಚಲಿಸುವ ಮುನ್ನ ಚಕ್ರಗಳ ಅಡಿ ನಿಂಬೆಹಣ್ಣನ್ನು ಇಟ್ಟು ವಾಹನ ಚಲಿಸುವ ಪರಿಪಾಠ ಇಟ್ಟುಕೊಂಡಿದ್ದಾರೆ. ಆಯುಧಪೂಜೆಯ ದಿನ ದ್ವಿಚಕ್ರಗಳಿಗೆ ಹಾರವಾಗಿ ಅಷ್ಟೆ ಅಲ್ಲದೆ ಚಕ್ರಗಳ ಅಡಿ ಇಡುವುದು ಸಾಮಾನ್ಯ. ಅಷ್ಟು ನಿಂಬೆಹಣ್ಣನ್ನು ಹೆಚ್ಚಿ ಹಾಕಿ ಎಷ್ಟೊಂದು ಷರಬತ್ತು, ಜ್ಯೂಸ್ ಮಾಡಬಹುದಿತ್ತು ಎಂದು ಕೆಲವರು ಕೊರಗುವುದುಂಟು. ಬಹುತೇಕ ಋಣಾತ್ಮಕ ಅಂಶವನ್ನು ನಿವಾರಿಸುವ ಶಕ್ತಿ ಇದಕ್ಕಿದೆ ಎಂಬ ನಂಬಿಕೆ ಇರಬಹುದು. ಮಾಂತ್ರಿಕರು, ಜ್ಯೋತಿಷಿಗಳು ಮಂತ್ರಿಸಿದ ನಿಂಬೆಹಣ್ಣನ್ನು ಮನೆಯಲ್ಲಿ ದೇವರ ಮನೆಯಲ್ಲಿ ಇಟ್ಟು ಪೂಜಿಸಲು ಕೊಡುವುದುಂಟು.



■ ಗೊರೂರು ಶಿವೇಶ್